ಭಾರತೀಯ ಸಾಹಿತ್ಯದಲ್ಲಿ ಪ್ರೇಮಚಂದ್ (1880–1936) ಎಂದು ಪ್ರಸಿದ್ಧರಾದ ಧನಪತ್‌ರಾಯ್ ಶ್ರೀವಾಸ್ತವ ಅವರದು ಹಿಂದಿ ಕಾದಂಬರಿಲೋಕದಲ್ಲಿ ದೊಡ್ಡ ಹೆಸರು. ಹಲವು ತಲೆಮಾರುಗಳಿಗೆ ಸಾಹಿತ್ಯದ ರುಚಿಯನ್ನು ಹತ್ತಿಸುತ್ತಾ ಬಂದಿರುವ ಪ್ರೇಮಚಂದರ ಕಥನಗಳು ಕನ್ನಡಿಗರ ನಡುವೆಯೂ ಜನಪ್ರಿಯ. ಮೊದಲಿಗೆ ಉರ್ದುವಿನಲ್ಲಿ ಬರೆಯುತ್ತಿದ್ದ ಅವರು, ನಂತರ ಹಿಂದಿಯನ್ನು ಬರವಣಿಗೆಯ ಭಾಷೆಯಾಗಿಸಿಕೊಂಡರು.

ಇಚ್ಛಿಸಲಾರಳೆಂದು ನನಗೆ ಹೊಳೆದಿದೆ. ಪಾಪ! ಇದು ಅವಳ ತಪ್ಪಲ್ಲ. ನಮ್ಮ ಪೋಷಕರು ಎಸಗಿದ ಭಾರಿ ಅನ್ಯಾಯ ಇದು ನಮಗೆ.

* * *

ನೆನ್ನೆ ವೃಂದಳ ಆಂತರ್ಯ ಬಯಲಿಗೆ ಬಂದಿತು. ನನ್ನ ಕೆಲವು ಸ್ನೇಹಿತರು ಸಮಾನಮನಸ್ಕರ ಸಹಪಂಕ್ತಿ ಭೋಜನ ವ್ಯವಸ್ಥೆ ಮಾಡೋಣ ಎಂಬ ಪ್ರಸ್ತಾವನೆಯನ್ನು ನನ್ನ ಮುಂದಿಟ್ಟರು. ಕೆಲವು ದಿನಗಳ ಚರ್ಚೆಯ ಬಳಿಕ, ಆಯ್ದ ಕೆಲವು ಗಣ್ಯವ್ಯಕ್ತಿಗಳು ಭೋಜನ ವ್ಯವಸ್ಥೆಯನ್ನು ನೆನ್ನೆ ದಿನ ಏರ್ಪಡಿಸಿದ್ದರು. ನಾನು ಸೇರಿದಂತೆ ನನ್ನೊಂದಿಗೆ ನಾಲ್ಕೇ ನಾಲ್ಕು ಮಂದಿ ಗೌರವಾನ್ವಿತ ಬ್ರಾಹ್ಮಣರು ಮಾತ್ರ ಇದಕ್ಕೆ ಕೈ ಜೋಡಿಸಿದ್ದು, ಉಳಿದವರೆಲ್ಲ ಅನ್ಯಜಾತಿಯವರು. ಈ ಮುಕ್ತ ಮನಸ್ಸನ್ನು ವೃಂದ ಸಹಿಸಿಕೊಳ್ಳಲಿಲ್ಲ. ಭೋಜನದ ಬಳಿಕ ನಾನು ಮನೆಗೆ ಹೋದಾಗ ಅವಳು ಪ್ರಕ್ಷುಬ್ಧಗೊಂಡವಳಂತೆ, ಯಾರೋ ಅವಳನ್ನು ತೀರಾ ನೋಯಿಸಿದಂತೆ ಕಂಡು ಬಂದಳು. ವ್ಯಥೆ ತುಂಬಿದ ನೋಟದಲ್ಲಿ ಆಕೆ ನನ್ನನ್ನು ದಿಟ್ಟಿಸುತ್ತ 'ಸ್ವರ್ಗದ ಬಾಗಿಲುಗಳು ಈಗ ನಿಶ್ಚಯವಾಗಿಯೂ ನಿಮಗೆ ತೆರೆದುಕೊಂಡಿವೆ!' ಎನ್ನಬೇಕೆ? ಈ ಬಿರುನುಡಿಗಳು ನನ್ನ ಹೃದಯಕ್ಕೆ ಬಾಣದಂತೆ ಇರಿದವು. ಉದ್ವಿಗ್ನಗೊಂಡ ನಾನು 'ಯಾರು ಅಂಗವಿಕಲರೋ, ಕರ್ತವ್ಯಹೀನರೋ, ನಿರ್ಜೀವಗಳೋ ಅಂತಹವರು ಮಾತ್ರವೇ ನಾಕ-ನರಕದ ಬಗ್ಗೆ ಚಿಂತಿಸುತ್ತಾರೆ. ನನ್ನ ನಾಕ ಮತ್ತು ನರಕ ಎರಡೂ ಈ ಇಳೆಯ ಮೇಲೆ ಇವೆ. ನಾನೀಗ ಇಲ್ಲಿ, ಈ ಕ್ರಿಯಾ ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸಲು ಇಚ್ಛಿಸಿರುವೆ' ಎಂದೆ.

**ಪತ್ನಿ**

'ನಿಮ್ಮ ಪುರುಷಾರ್ಥದ ಸಾಹಸಗಳಿಗೆ ದೈವಾನುಗ್ರಹ ಸಿಕ್ಕಲಿ! ಇವತ್ತಿನಿಂದ, ಸಂತೋಷ ಮತ್ತು ಶಾಂತಿ ಜಗತ್ತನ್ನು ಆಳಲಿ. ಈ ಜಗತ್ತನ್ನು ತಾವು ಉದ್ಧರಿಸಿರುವಿರಿ. ಇದಕ್ಕಿಂತ ಮಹತ್ವದ್ದೇನು ಬೇರೆ ಇದೆ, ತಾವು ಸ್ವೀಕರಿಸದೆ ಇರೋದಕೆ?'

'ದೇವರು ನಿನಗೆ ಈ ಅಂಶವನ್ನು ಅರ್ಥಮಾಡಿಕೊಳ್ಳುವ ವಿವೇಕವನ್ನು ಕೊಟ್ಟಿಲ್ಲ. ಹಾಗಾಗಿ ನಾನು ಹೇಗೆ ನಿನಗೆ ಇದನ್ನು ವಿವರಿಸಿ ಹೇಳಲಿ? ಶತಮೂರ್ಖನೂ ಕೂಡ ನಮ್ಮ ನಮ್ಮ ನಡುವೆ ಇರುವ ಈ ತಾರತಮ್ಯ ಭೇದ ನಮ್ಮ ದೇಶವನ್ನು ಹೇಗೆಲ್ಲ ಹಾಳುಮಾಡಿದೆ ಎಂದು ಅರ್ಥ ಮಾಡಿಕೊಳ್ಳಬಲ್ಲ. ಈ ಭೇದಭಾವವನ್ನು ನಾವು ನಿವಾರಿಸಿಕೊಳ್ಳುವುದರಿಂದ ದೇಶಕ್ಕೆ ಲಾಭವಿದೆ ಎನ್ನುವುದರಲ್ಲಿ ಸಂದೇಹವಿಲ್ಲವೆಂದು ಯಾರೊಬ್ಬರು ಭಾವಿಸಬಲ್ಲರು. ಆದಾಗ್ಯೂ, ಕೆಲವರಿಗೆ ಸತ್ಯ ಏನು ಎಂದು ಗೊತ್ತಿದ್ದರೂ ಸಹ, ಬಾಯಿ ಬಿಡಲೊಪ್ಪರು' ಎಂದೆ ನಾನು ಸಿಡುಕಿನಿಂದ.

ವೃಂದ: 'ಸಹಪಂಕ್ತಿ ಭೋಜನ ಹೊರತುಪಡಿಸಿ ಪರಸ್ಪರ ಪ್ರೀತಿಸಲು ಬೇರೆ ದಾರಿಗಳಿಲ್ಲವೆ?'

ಈ ಚರ್ಚೆಯಲ್ಲಿ ಭಾಗವಹಿಸುವುದು ವೃಥಾ ವ್ಯರ್ಥವೆಂದುಕೊಂಡೆ. ಚರ್ಚೆಗೆ ನಿಲುಕದ ತತ್ವವನ್ನು ನಾನೀಗ ಆಶ್ರಯಿಸಬೇಕೆಂದುಕೊಂಡೆ. ವೃಂದ ತೀರಾ ಧರ್ಮನಿಷ್ಠೆಯುಳ್ಳವಳು ಆದ್ದರಿಂದ ಅವಳೇ ಭಾವಿಸಿದ ಸತ್ಯವೆನ್ನುವ ಪವಿತ್ರ ಗ್ರಂಥಗಳಿಂದ ಅವಳನ್ನು ಸೋಲಿಸಲು ನಿರ್ಧರಿಸಿದೆ.

'ಅಸಾಧ್ಯವೇನೂ ಅಲ್ಲ ಅದು. ಆದರೆ, ಖಂಡಿತವಾಗಿಯೂ ಅದು ತೊಡಕಿನದೆ' ಎಂದೆ ಗಂಭೀರವಾಗಿ. 'ಆದರೆ ಯೋಚಿಸಿ ನೋಡು, ನಾವೆಲ್ಲರೂ ಒಬ್ಬ ತಂದೆಯ ಮಕ್ಕಳಾಗಿದ್ದರೂ ಒಬ್ಬರಿಗೊಬ್ಬರೂ ಅಸಹ್ಯ ಪಡುತ್ತ ಮೇಲುಕೀಳು ಎಂಬ ವ್ಯವಸ್ಥೆಯನ್ನು ಎತ್ತಿ ಹಿಡಿಯುವಲ್ಲಿ ಸದಾ